## ವಿಂಡೋಸ್ ಫೋನ್ 8

ಈ ಮೊಬೈಲ್ ಆಪರೇಟಿಂಗ್ ವ್ಯವಸ್ಥೆ ನೋಡಲು ಅಂದವಾಗಿದ್ದು, ವಿನ್ಯಾಸವೂ ಅದ್ಭುತವಾಗಿದ್ದು ಬಳಸುವುದು ಕೂಡಾ ಸುಲಭ. ಆ್ಯಪ್‌ಗಳು ಬೇರೆಯದಕ್ಕೆ ಹೋಲಿಸಿದರೆ ವಿಭಿನ್ನವಾಗಿವೆ. ಮೈಕ್ರೋಸಾಫ್ಟ್ ಆಫೀಸ್, ಔಟ್‌ಲುಕ್, ಸಾಮಾಜಿಕ ಜಾಲತಾಣಗಳ ಸಂಯೋಜನೆ ಕೂಡಾ ಮೊದಲನೇ ಸ್ಥಾನದಲ್ಲಿ ನಿಲ್ಲುವಂತೆ ಮಾಡಿವೆ. ಕರೆ ಮಾಡಲು, ಸಂದೇಶ ಕಳಿಸಲು, ಫೇಸ್‌ಬುಕ್ ಬಳಕೆ ಮಾಡಲು, ಅದರಲ್ಲೂ ಔಟ್‌ಲುಕ್, ಹಾಟ್‌ಮೇಲ್, ಎಕ್ಸ್‌ಚೇಂಜ್, ಸ್ಕೈಡ್ರೈವ್, ಎಕ್ಸ್‌ಬಾಕ್ಸ್‌ಗೆ ಸಂಪರ್ಕ ಪಡೆದವರಿಗೆ ಇದು ಅನುಕೂಲ. ಆದರೆ ಆ್ಯಂಡ್ರಾಯ್ಡ್ ಮತ್ತು ಐಒಎಸ್‌ಗೆ ಹೋಲಿಸಿದರೆ ಆ್ಯಪ್‌ಗಳ ಆಯ್ಕೆಗೆ ಮಿತಿ ಇದೆ.







## ಡೈಸಿ ದಿ ಡೈನೋಸಾರ್

ಇದು ಐಫೋನ್ ಆ್ಯಪ್ ಆಗಿದ್ದು ಮಕ್ಕಳಿಗೆ ಮೂಲಭೂತ ಕೋಡ್ ಚಿಂತನೆ ಬಗ್ಗೆ ಕಲಿಯಲು ನೆರವಾಗುತ್ತದೆ. ಪ್ರೋಗ್ರಾಮಿಂಗ್ ಅನ್ನು ನೇರವಾಗಿ ಕಲಿಸದಿದ್ದರೂ ಈ ವಿಷಯದಲ್ಲಿ ಮಕ್ಕಳಿಗೆ ಆಸಕ್ತಿ ಬರುವಂತೆ ಮಾಡುವ ಆ್ಯಪ್ ಇದು. ನಾಲ್ಕು ವರ್ಷದ ಮಕ್ಕಳು ಕೂಡಾ ಸುಲಭವಾಗಿ ಕಲಿಯಬಹುದು. ಈ ಆ್ಯಪ್‌ನಲ್ಲಿ ಹಸಿರು ಬಣ್ಣದ ಡೈನೋಸಾರ್ ಮಕ್ಕಳಿಗೆ ಕಲಿಸುತ್ತದೆ. ಆ್ಯಪ್ ಅನ್ನು ಆರಂಭಿಸಿದೊಡನೆ ಚಾಲೆಂಜ್ ಮೋಡ್ ಕಾಣಿಸಿಕೊಳ್ಳುತ್ತದೆ. ಇಲ್ಲಿ ಮೇಲ್ಮೈ ಬಳಕೆ ಬಗ್ಗೆ ಮಕ್ಕಳಿಗೆ ಹಂತ ಹಂತವಾಗಿ ಸೂಚನೆಗಳು ಲಭಿಸುತ್ತವೆ. ಫ್ರೀ ಪ್ಲೇ ಮೋಡ್‌ನಲ್ಲಿ ಮಕ್ಕಳು ಪ್ರಯೋಗ ಮಾಡಬಹುದು. ಡೈನೋಸಾರ್ ಚಲಿಸುವಂತೆ ಮಾಡಿದರೆ ಸಾಕು.

## ಸ್ಕೈಕ್ಯೂರ್




ಈ ಉಚಿತ ಐಫೋನ್ ಆ್ಯಪ್ ನೆಟ್‌ವರ್ಕ್ ದಾಳಿ ವಿರುದ್ಧ ರಕ್ಷಣೆ ನೀಡುತ್ತದೆ. ನೆಟ್‌ವರ್ಕ್ ಭದ್ರತೆಗೆ ಎರಗಬಹುದಾದ ದಾಳಿಯನ್ನು ಹೇಗೆ ಎದುರಿಸಬೇಕು ಎಂಬುದರ ಬಗ್ಗೆ ಸೂಚನೆ ನೀಡುತ್ತದೆ. ನೀವು ನಡೆಸುವ ಆನ್‌ಲೈನ್ ಚಟುವಟಿಕೆಗಳ ಮೇಲೆ ಕಣ್ಣಿಡುವ ಗೂಢಚಾರಿಗಳಿದ್ದು, ನಿಮ್ಮ ಬ್ರೌಸರ್ ಮೇಲೆ ನಿಯಂತ್ರಣ ಹೊಂದುವ ಸಾಧ್ಯತೆಗಳಿವೆ. ಆದರೆ ಅವುಗಳ ಬಗ್ಗೆ ನಿಮ್ಮ ಗಮನ ಹೋಗದೆ ಬಲಿಪಶುವಾಗುವ ಸಂಭವ ಬಹಳಷ್ಟಿರುತ್ತದೆ. ಈ ಆ್ಯಪ್ ಅನ್ನು ಚಾಲನೆಗೊಳಿಸಿದ ನಂತರ ಅದು ನಿಮ್ಮ ಫೋನ್ ಸಂಪರ್ಕ ಹೊಂದಿರುವ ಎಲ್ಲಾ ವೈರ್‌ಲೆಸ್ ನೆಟ್‌ವರ್ಕ್‌ಗಳನ್ನು ಜಾಲಾಡುತ್ತದೆ. ಹಾಗಂತ ಇದು ಆ್ಯಂಟಿವೈರಸ್ ಅಲ್ಲ. ಆದರೆ ನೀವು ಪಡೆಯುವ ಹಾಗೂ ಕಳಿಸುವ ಅಂಕಿ– ಅಂಶಗಳು ನಿಗದಿತ ಜಾಗದಿಂದಲೇ ಬಂದು– ಹೋಗುವುದರ ಮೇಲೆ ನಿಗಾ ವಹಿಸುತ್ತದೆ. ಈ ಆ್ಯಪ್ ಅನ್ನು ನಿರಂತರ ಚಾಲನೆಯಲ್ಲೇ ಇಟ್ಟಿರಬೇಕಾಗುತ್ತದೆ.

hotwire™

## ಹಾಟ್‌ವೈರ್

ಇದು ಪ್ರವಾಸ ಹೋಗುವವರಿಗೆ ಅನುಕೂಲಕರ. ಕಾರು ಬಾಡಿಗೆ ಪಡೆಯಲು, ಹೋಟೆಲ್ ಹುಡುಕಿ ಬುಕ್ ಮಾಡಲು ಇದು ನೆರವು ನೀಡುತ್ತದೆ. ಈ ಐಫೋನ್ ಆ್ಯಪ್‌ನಿಂದ ನೀವು ಕೊನೆಯ ಕ್ಷಣದಲ್ಲಿ ಈ ಸೇವೆಗಳನ್ನು ಪಡೆಯಬಹುದು. ಆದರೆ ಯಾವ ಹೋಟೆಲ್, ಯಾವ ಕಂಪೆನಿಯ ಬಾಡಿಗೆ ಕಾರು ಎಂಬುದು ನೀವು ಕ್ರೆಡಿಟ್ ಕಾರ್ಡ್ ಮೂಲಕ ಶುಲ್ಕ ಪಾವತಿಸುವವರೆಗೂ ಗೊತ್ತಾಗುವುದಿಲ್ಲ. ಜೊತೆಗೆ ಪ್ಯಾಕೇಜ್ ಅನುಕೂಲ ಒದಗಿಸುವುದಿಲ್ಲ.

■ ಎಸ್. ತುಂಬೆ